ರಾಜ್ಯ ಸರ್ಕಾರದ ಹುದ್ದೆಗಳಿಗೆ ನೇಮಕಾತಿಯಲ್ಲಿ ಗರಿಷ್ಠ ವಯೋಮಿತಿಯ ಸಡಿಲಿಕೆ ಬಗ್ಗೆ

237 ಶ್ರೀ ಎಂ. ರೇವಣ್ಣ (ಮಾಗಡಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) *ರಾಜ್ಯ ಸರ್ಕಾರದ ಹುದ್ದೆಗಳಿಗೆ ನೇಮಕಾತಿಯಲ್ಲಿ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ವಿಷಯ ಸರ್ಕಾರ ಪರಿಶೀಲನೆಯಲ್ಲಿದೆಯೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಹೌದು.

ಕಲ್ಲು ಗುತ್ತಿಗೆದಾರರ ಬಗ್ಗೆ.

239 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಾಗಡಿ ತಾಲ್ಲೂಕಿನಲ್ಲಿರುವ ಕಲ್ಲು ಗಣಿ ಗುತ್ತಿಗೆದಾರರ ಸಂಖ್ಯೆ ಎಷ್ಟು?*

ಆ) *ಅದರಲ್ಲಿ ಸದರಿ ಗುತ್ತಿಗೆದಾರರು ಪಡೆದಿರುವ ಜಮೀನು ಎಷ್ಟು? ಹಾಗೂ ಪಟ್ಟಾ ಜಮೀನು ಎಷ್ಟು?*

ಇ) *ಅಕ್ರಮವಾಗಿ ಕಲ್ಲು ಸಾಗಾಣಿಕೆಯಾಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ, ಸರ್ಕಾರವು ಅದನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳೇನು?*

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) :

ಅ) 10

ಆ) 118.15 ಎಕರೆಗಳು ಸರ್ಕಾರಿ ಜಮೀನು ಮತ್ತು ಪಟ್ಟಾ ಜಮೀನು ಇರುವುದಿಲ್ಲ.

ಇ) ಬಂದಿರುತ್ತದೆ.

ಈ) ನಿಯತಕಾಲಿಕ ತನಿಖೆಯಲ್ಲಿ ಎಲ್ಲಿಯಾದರೂ ಅನಧಿಕೃತ ಕಲ್ಲುಗಣಿಗಾರಿಕೆಯ ಗಮನಕ್ಕೆ ಬಂದಿರುವ ಸಮಯದಲ್ಲಿ ಅಂತಹ ಕಲ್ಲು ಗಣಿಕಾರಿಕೆಯನ್ನು ಇಲಾಖೆ ಅಧಿಕಾರಿಗಳು ನಿಲ್ಲಿಸಿರುತ್ತಾರೆ.

ಲೋಕಸೇವಾ ಆಯೋಗದ ಬಗ್ಗೆ

240 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯವಲ್ಲಿ ಕಳೆದ ನಾಲ್ಕು ವರ್ಷದಿಂದ ಕೆ.ಎ.ಎಸ್. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸದಿರುವುದು ನಿಜವೆ,*

ಆ) *ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು?*

ಇ) *ಸದರಿ ಪರೀಕ್ಷೆಗಳನ್ನು ಯಾವಾಗ ಮತ್ತು ಎಷ್ಟು ವರ್ಷದೊಳಗೆ ನಡೆಸಲಾಗುತ್ತದೆ.*

ಈ) *ಈ ಮೇಲಿನ ಪರೀಕ್ಷೆಗಳಿಗೆ ವಯೋಮಿತಿಯನ್ನೇನಾದರು ಸಡಿಲಿಸಲಾಗುವುದೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಮಿತವ್ಯಯ ಆದೇಶಗಳ ಚಾಲ್ತಿ ಮತ್ತು ನೇರ ನೇಮಕಾತಿಯ ನಿರ್ಬಂಧ.

ಇ) ಈ ವಿಷಯ ಪರಿಶೀಲನೆಯಲ್ಲಿದೆ.